ಅ) *1996-97ರ ಸಾಲಿನಲ್ಲಿ ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಕೈಗೊಳ್ಳಲಾದ ನೀರಾವರಿ ಕಾಮಗಾರಿಗಳು ಯಾವುವು?*

ಆ) *ಅದಕ್ಕೆ ಖರ್ಚು ಮಾಡಲಾದ ಹಣವೆಷ್ಟು?*

ಇ) *ಬಾಕಿ ಇರುವ ಕಾಮಗಾರಿಗಳು ಯಾವುವು? ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು) :

ಅ) ಇನಾಮ ವೀರಾಪುರ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ

ಆ) 1997ರ ಮಾರ್ಚ್‌ವರೆಗೆ ರೂ. 0.99 ಲಕ್ಷ ವೆಚ್ಚ ಮಾಡಲಾಗಿದೆ.

ಇ) ಮೇಲಿನ ಒಂದೇ ಕಾಮಗಾರಿಯನ್ನು ಉದ್ದೇಶಿಸಲಾಗಿದೆ.

ಸಮುದ್ರ ಕೊರೆತದ ತಡೆಗೋಡೆ ರಚನೆ

2068 - ಶ್ರೀ ಐ.ಎಂ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ಉದ್ದದ ಸಮುದ್ರ ತೀರವಿದೆ?*

ಆ) *ಸದ್ರಿ ಸಮುದ್ರ ತೀರವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ವಿಧಾನ ಸಭಾ ಕ್ಷೇತ್ರಗಳನ್ನು ಒಳಗೊಂಡಿದೆ?*

ಇ) *ಪ್ರತೀ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಎಷ್ಟು ಕಿ.ಮೀ. ಉದ್ದದ ಸಮುದ್ರ ತೀರ ಒಳಗೊಂಡಿದೆ. (ವಿಧಾನ ಸಭಾವಾರು ಕ್ಷೇತ್ರದ ವಿವರ ಒದಗಿಸುವುದು) ?*

ಈ) *ಪ್ರತೀ ವಿಧಾನ ಸಭಾ ಕ್ಷೇತ್ರದ ಸಮುದ್ರತೀರದಲ್ಲಿ ಅಪಾಯದ ಪ್ರದೇಶಗಳೆಂದು ಗುರುತಿಸಲಾದ ಸ್ಥಳಗಳು ಯಾವುವು (ಕ್ಷೇತ್ರವಾರು ವಿವರ ಒದಗಿಸುವುದು)*

ಉ) *1996-97ನೇ ಸಾಲಿನಲ್ಲಿ ತಡೆಗೋಡೆ ರಚನೆಗೆ ವ್ಯಯ ಮಾಡಿದ ಹಣವೆಷ್ಟು? (ಕ್ಷೇತ್ರವಾರು ವಿವರ ಒದಗಿಸುವುದು) ?*

ಊ) *1997-98ನೇ ಸಾಲಿನಲ್ಲಿ ತಡೆಗೋಡೆಗೆ ವ್ಯಯ ಮಾಡಲು ಉದ್ದೇಶಿಸಿದ ಹಣವೆಷ್ಟು ? (ವಿವರ ಒದಗಿಸುವುದು)?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ) 140 ಕಿ.ಮೀ

ಆ) 7 ವಿಧಾನ ಸಭಾ ಕ್ಷೇತ್ರಗಳು

ಇ) ಈ) ಉ) ಮತ್ತು ಊ) ಉತ್ತರವನ್ನು ಅನುಬಂಧದಲ್ಲಿ ನೀಡಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಐ.ಎಂ. ಜಯರಾಮ ಶೆಟ್ಟಿ, ಅವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ :2963 ಕ್ಕೆ ಅನುಬಂಧ

ಕ್ರಮ ಸಂಖ್ಯೆ	ದಕ್ಷಿಣ ಕನ್ನಡ ಜಿಲ್ಲೆಯವಿಧಾನ ಸಭಾ ಕ್ಷೇತ್ರಗಳು	ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಸಮುದ್ರ ತೀರದ ಉದ್ದ (ಕಿ.ಮೀ. ಗಳಲ್ಲಿ)	ಅಪಾಯದ ಪ್ರದೇಶಗಳೆಂದು ಗುರುತಿಸಲಾದ ಸ್ಥಳಗಳು	1996-97ನೇ ಸಾಲಿನಲ್ಲಿ ತಡೆಗೋಡೆ ರಚನೆಗೆ ಮಾಡಿದ ವೆಚ್ಚ (ಲಕ್ಷ ರೂ.ಗಳಲ್ಲಿ)	1997-98ನೇ ಸಾಲಿನಲ್ಲಿ ತಡೆ ಗೋಡೆಗಾಗಿ ವೆಚ್ಚ ಮಾಡಲು ಉದ್ದೇಶಿಸಿರುವ ಹಣ (ಲಕ್ಷ ರೂ.ಗಳಲ್ಲಿ)
1.	ಉಳ್ಳಾಲ	10	ಉಳ್ಳಾಲ	0.62	10.10
2.	ಸುರತ್ಕಲ್	30	ಬೆಂಗ್ರೆ, ಸಹಿಹಿತ್ಲು, ಕುಳಾಯಿ, ಮುಕ್ಕ, ಗುಡ್ಡಕೊಪ್ಲ, ಹೊಸಬೆಟ್ಟು, ದೊಡ್ಡಕೊಪ್ಲ, ತಣ್ಣೀರು ಬಾವಿ.	46.69	37.20
3.	ಕಾಪು	20	ಮೂಳುರು, ಕಾಪುರ, ಪೊಲಿಪು, ಪೆಜಮಾಡಿಕೋಡಿ, ಬಡಾ ಏರ್ಮಾಳು, ತೆಂಕ ಏರ್ಮಾಳು, ಉಚ್ಚಿಲ.	108.38	54.90
4.	ಉಡುಪಿ	10	ಉಳಿಯಾರ ಹೋಳಿ ಪಡುಕೆರೆ, ಎಡಬಂಡೇಶ್ವರ	55.88	16.20
5.	ಬ್ರಹ್ಮಾವರ	20	ಹೊಡೆಕೆಮ್ಮಣ್ಣು ಕೋಡಿಬೇಂದ್ರೆ, ಪಡುತೋನ್ಸಿ ಕೋಟತಟ್ಟು, ಕೋಡಿ ಕನ್ಯಾನ, ಪಾರಂಪಳ್ಳಿಪಡುಕೆರೆ	72.78	33.60
6.	ಕುಂದಾಪುರ	30	ಕೋಡಾಡಿ, ಬೀಜಾಡಿ, ಗೋವಡಿ, ಕಸಬಾಕೋಡಿ, ಗುಜ್ಜಾಡಿ, ಮರವಂತೆ.	63.37	18.40
7.	ಬೈಂದೂರ	20	ಕಿರುಮಂಜೇಶ್ವರ, ಗಂಡೇಬೈಲು, ಕೋಟೆಬಾಗಿಲು, ಕಳಿಹಿತ್ಲು, ಅಳವೆಗಡ್ಡೆ, ಅಳಿವೆ ಕೋಡಿ, ಅಮ್ಮನವರ ತೊಪ್ಪಲು, ಕರ್ಕಿಕಾಳಿ	26.40	59.60
		140		**374.12**	**230.00**